ಮೂಲ ದಾವಾ ನಂಃ 57/2019

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **02.08.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಎಸ್.ಬಿ 14 ರಿಂದ 23 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಈ ದಾವೆಯನ್ನು ದಾಖಲಿಸುವ ಕಾಲಕ್ಕೆ ದಾವಾಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ತೆಗೆಸಿರುತ್ತೇನೆ. ದಾವಾಸ್ತಿಗಳಿಗೆ ಸಂಬಂಧಿಸಿದ 1949-50 ನೇ ಸಾಲಿನ ದಾಖಲಾತಿಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ನಿಪಿ.3 ರಲ್ಲಿ ಕಬ್ಜಾ ಇಲ್ಲದ ಖರೀದಿದಾರ ಎಂದು ನಮೂದು ಮಾಡಲಾಗಿದೆ ಎಂದರೆ , ನಾವು ಯಾವ ಆಸ್ತಿಯನ್ನು ಖರೀದಿಗೆ ಕೊಟ್ಟಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಎಂಟ್ರಿ ನಮ್ಮ ಅಜ್ಜ ಸಿದ್ದಪ್ಪ ಯಲ್ಲಪ್ಪ ವಡ್ಡರ ಆಸ್ತಿಯನ್ನು ತೊಂಡಿ ಖರೀದಿ ಮಾಡಿದ ಬಗ್ಗೆ ಆಗಿರುತ್ತದೆ ಎಂದರೆ ಅವರು ಕೊಟ್ಟಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜ ಸಿದ್ದಪ್ಪ ಯಲ್ಲಪ್ಪ ವಡ್ಡರ ಯಾವ ದಿನಾಂಕದಂದು ತೀರಿಕೊಂಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನಮ್ಮ ಅಜ್ಜ ತೀರಿಕೊಂಡ ನಂತರ , ಅವರ ವಾರಿಸುದಾರರ ಹೆಸರು ಮ್ಯೂಟೇಷನ್ ಎಂಟ್ರಿ ಸಂಖ್ಯೆ 835 ರ ಪ್ರಕಾರ ದಾಖಲಾಗಿರುತ್ತದೆ ಎಂದರೆ, ಸಾಕ್ಷಿಯು ನಾವು ವಾರಿಸಾ ಕೂರಿಸಲು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಹಾಗಾದರೇ ನಮ್ಮ ಅಜ್ಜನವರು ತೀರಿಕೊಂಡ ನಂತರ, ಯಲ್ಲಪ್ಪ ಸಿದ್ದಪ್ಪ ವಡ್ಡರ ಮತ್ತು ಹನುಮಂತಪ್ಪ ಸಿದ್ದಪ್ಪ ವಡ್ಡರರವರ ಹೆಸರುಗಳು ವಾರಿಸಾ ನಾತೆಯಿಂದ ಬಂದಿರುವುದಿಲ್ಲವೇ ಎಂದರೆ ಇಲ್ಲ. ಮೂಲ ಪುರುಷ ಸಿದ್ದಪ್ಪ ಯಲ್ಲಪ್ಪ ವಡ್ಡರರವರಿಗೆ ಮೂಲ ಮಾಲೀಕರು ಆಸ್ತಿಯನ್ನು ತೊಂಡಿ ಖರೀದಿಯ ಪ್ರಕಾರ ಮಾರಾಟ ಮಾಡಿದ್ದು, ನಂತರದ ದಿನಗಳಲ್ಲಿ ಮೂಲ ಮಾಲೀಕರು ಯಲ್ಲಪ್ಪ ಸಿದ್ದಪ್ಪ ವಡ್ಡರವರಿಗೆ 50 ರೂಪಾಯಿಯನ್ನು ಹಿಂದುರುಗಿಸಿ, ತೊಂಡಿ ಖರೀದಿಯನ್ನು ರದ್ದುಪಡಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ. ಕಬ್ಜಾ ಇಲ್ಲದ ತೊಂಡಿ ಖರೀದಿ ಎಂಟ್ರಿಯನ್ನು ರದ್ದು ಮಾಡುವ ಪೂರ್ವದಲ್ಲಿ ಯಲ್ಲಪ್ಪ ಸಿದ್ದಪ್ಪ ವಡ್ಡರವರಿಗೆ ನೋಟಿಸ್ಸ ಜಾರಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಮ್ಯೂಟೇಷನ್ ಎಂಟ್ರಿ ಸಂಖ್ಯೆ 933 ದಾಖಲಿಸುವ ಸಮಯದಲ್ಲಿ , ಅದರ ಬದಿಗೆ ಎಕ್ಸಟ್ರಾಕ್ಟ ಜಾರಿ ಎಂದು ನಮೂದು ಮಾಡಲಾಗಿದೆ ಎಂದರೆ, ಇವರೇನಾದರೂ ಬರೆಸಿರಬಹುದು ಎಂದು ನುಡಿಯುತ್ತಾರೆ. ಯಲ್ಲಪ್ಪ ಸಿದ್ದಪ್ಪ ವಡ್ಡರವರು ತೀರಿಕೊಂಡು ಸುಮಾರು 10-12 ವರ್ಷಗಳಾಗಿವೆ. ನಾನು ನನ್ನ ವಾದಪತ್ರದ 4 ನೇ ಖಂಡಿಕೆಯಲ್ಲಿ ಯಲ್ಲಪ್ಪ ಸಿದ್ದಪ್ಪ ವಡ್ಡರ ಈತನು ದಿನಾಂಕಃ 10.09.2001 ರಂದು ತೀರಿಕೊಂಡಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಹೌದು. ಯಲ್ಲಪ್ಪರವರು 50 ರೂಪಾಯಿಯನ್ನು ಮರಳಿ ಪಡೆದುಕೊಂಡಿದ್ದರಿಂದ, ತಮ್ಮ ಜೀವಿತಾವಧಿಯಲ್ಲಿ 2001 ನೇ ಇಸ್ವಿಯವರೆಗೂ ತೊಂಡಿ ಖರೀದಿ ರದ್ದಾಗಿದ್ದನ್ನು ಪ್ರಶ್ನಿಸಿದ್ದು ಇರುವುದಿಲ್ಲ ಎಂದರೆ , ಸಾಕ್ಷಿಯು ಅವರಗೆ ಮಾಡಿಕೊಂಡು ತಿನ್ನಲು ಕೊಟ್ಟಿದ್ದು ನಮ್ಮ ಮಕ್ಕಳು ದೊಡ್ಡವರಾದ ಮೇಲೆ ಬಿಟ್ಟುಕೊಡಿಸುವಂತೆ ಹೇಳಿದ್ದರು ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಪತ್ರದ 5 ನೇ ಪ್ಯಾರಾದ ಕೊನೆಯ ಸಾಲುಗಳಲ್ಲಿ ಸದರಿ ದಾವಾಸ್ತಿಯನ್ನು ವಾದಿ ಹಾಗೂ 1 ರಿಂದ 13 ನೇ ಪ್ರತಿವಾದಿಯರು ಸಾಮೂಹಿಕವಾಗಿ ಕಬ್ಜೆ ವಹಿವಾಟು ಹೊಂದಿದ್ದು ಇರುತ್ತದೆ ಎಂದು ಬರೆಸಿರುತ್ತೀರಿ ಎಂದರೆ , ನಾನು ಹಾಗೇ ಬರೆಸಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ವಾದಪತ್ರದ 6 ನೇ ಖಂಡಿಕೆಯಲ್ಲಿ ಮೂಲತಃ ದಾವಾದ ಆಸ್ತಿಯು - ------ ಉಪಭೋಗ ಮಾಡುತ್ತಾ ಬಂದಿದ್ದು ಇರುತ್ತದೆ ಎಂದು ಬರೆಸಿರುತ್ತೇನೆಯೋ ಅಥವಾ ಇಲ್ಲವೋ ಎಂದರೆ, ಸಾಕ್ಷಿಯು ನಾನು ಹಾಗೆ

ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ವಾದಪತ್ರದ 5 ನೇ ಪ್ಯಾರಾದಲ್ಲಿ " 14 ರಿಂದ 24 ನೇ ಪ್ರತಿವಾದಿಯರ ಮೂಲ ಪುರುಷರಾದ ರುದ್ರಪ್ಪ ಈರಪ್ಪ ಕೊಂಡಿಕೊಪ್ಪ ಹಾಗೂ ದಾವಾದ ಆಸ್ತಿಯ ಮೂಲ ಮಾಲೀಕರಾದ ಈರಣಗೌಡ ಚನವೀರ ಗೌಡ ಪಾಟೀಲ ಇವರ ಜೊತೆ ಮಿಲಾಪೆಯಾಗಿ, ಕೊಟ್ಟಿ ದಾಖಲೆಗಳನ್ನು ಸೃಷ್ಟಿ ಎಂದು ಬರೆಸಲಾಗಿದೆ ಎಂದರೆ, ನಮ್ಮ ಜಾಗವನ್ನು ನಮಗೆ ಬಿಟ್ಟು ಕೊಡಬೇಕೆಂದು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವೆಯನ್ನು ಯಾವ ಇಸ್ವಿಯಲ್ಲಿ ಸಲ್ಲಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ನಾನು ದಾವೆಯನ್ನು ದಿನಾಂಕಃ 23.10.2019 ರಂದು ಸಲ್ಲಿಸಿರುತ್ತೇನೆ ಎಂದರೆ ಹೌದು. ನಾನು ತಿದ್ದುಪಡಿ ವಾದ ಪತ್ರವನ್ನು ದಿನಾಂಕಃ 02.02.2023 ರಂದು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ವಾದಪತ್ರದ 7 ನೇ ಖಂಡಿಕೆಯಲ್ಲಿ ಅಂದಾನಿಗೌಡ ಪಾಟಿಲ ಈತನು ಕೊಟ್ಟಿ ರೀತಿಯಾಗಿ ಕಬ್ಜಾ ಇಲ್ಲದ ಖರೀದಿ ಹಕ್ಕನ್ನು ಕಮ್ಮಿ ಮಾಡಿದ್ದು ಕಾನೂನಿಗೆ ವಿರುದ್ಧವಾಗಿ ಇರುತ್ತದೆ ಎಂದರೆ , ಸಾಕ್ಷಿಯು ನಾವು ಖರೀದಿಗೆ ಕೊಟ್ಟಿದ್ದು ಇರುವುದಿಲ್ಲವೆಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವೆದ ಪಾಟೀ ಸವಾಲಿಗೆ 14 ರಿಂದ 23 ನೇ ಪ್ರತಿವಾದಿಯ ಪರ ವಕೀಲರು ತಯಾರಿದ್ದು , ವಾದಿ ಪರ ವಕೀಲರು ಸಾಕ್ಷಿಗೆ ಹುಷಾರಿಲ್ಲವೆಂದು ಮತ್ತು ಸಾಕ್ಷಿಯು ಸ್ವಲ್ಪ ದಿನಗಳ ಹಿಂದೆ ಅಡಿಗೆ ಮಾಡುವ ಕಾಲಕ್ಕೆ ಮೈಯನ್ನು ಸುಟ್ಟಿಕೊಂಡಿರುತ್ತಾರೆಂದು ತಿಳಿಸಿ , ಮುಂದುವರೆದ ಪಾಟೀ ಸವಾಲಿನ್ನು ಮುಂದೂಡಬೇಕೆಂದು ಕೇಳಿಕೊಂಡಿರುತ್ತಾರೆ. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**